**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.**

ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದನ್ವಯ ಪುನಃ ಕರೆಯಿಸಿ
ಪ್ರಮಾಣ ವಚನ ಮಾಡಲಾದ ದಿ ಃ 01.07.2023
ಮು. ಪಾಟಿ ಸವಾಲು ಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದ

ನನ್ನ ತಂದೆ ಕಾಳೇಗೌಡರವರಿಗೆ ಮಹದೇವಪುರ ಹಾಗೂ ತರೀಪುರ ಗ್ರಾಮದ ಎಲ್ಲೆಯಲ್ಲಿ ಜಮೀನುಗಳು ಇರುತ್ತವೆ. ನನ್ನ ತಂದೆಗೆ ರಂಗಸಮುದ್ರ ಗ್ರಾಮದಲ್ಲಿ ಸ.ನಂ.283 ರಲ್ಲಿ ಹದಿನೈದುವರೆ ಗುಂಟೆ ವಿಸ್ತೀರ್ಣದ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ರಂಗನಾಥಪುರ ಗ್ರಾಮದಲ್ಲಿ ಸ.ನಂ.86 ರಲ್ಲಿ 3 ಎಕರೆ 3 ಗುಂಟೆ, ಸ.ನಂ.127 ರಲ್ಲಿ 2 ಎಕರೆ ಒಂದೂವರೆ ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ ಎಂದರೆ ಸುಳ್ಳು. ಸ.ನಂ.127 ರಲ್ಲಿನ ಆಸ್ತಿಯನ್ನು ನಮ್ಮ ಕುಟುಂಬದವರು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

ನನ್ನ ತಂದೆಗೆ ಸೇರಿದ ಮಂಗಳೂರು ಹೆಂಚಿನ ಮನೆ ಮಹದೇವಪುರ ಗ್ರಾಮದಲ್ಲಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ಸೇರಿದ ನಾಡಹೆಂಚಿನ ಮನೆ ಮಹದೇವಪುರ ಗ್ರಾಮದಲ್ಲಿರುತ್ತದೆ ಎಂದರೆ ಸುಳ್ಳು. ನನ್ನ ತಂದೆಗೆ ರಂಗನಾಥಪುರ ಗ್ರಾಮದ ಸ.ನಂ.164 ರಲ್ಲಿ 1 ಎಕರೆ ಹದಿನೆಂಟುವರೆ ಗುಂಟೆ ಹಾಗೂ ಸ.ನಂ.224 ರಲ್ಲಿ ಹತ್ತೊಂಬತ್ತುವರೆ ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ ಎಂದರೆ ಸುಳ್ಳು. ಸ.ನಂ.224 ರಲ್ಲಿ 20 ಗುಂಟೆ ವಿಸ್ತೀರ್ಣದ ಸ್ವತ್ತನ್ನು ನಮ್ಮ ಕುಟುಂಬದವರು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

ದಿಃ 30.06.2007 ರಲ್ಲಿ ನಮ್ಮ ಕುಟುಂಬದ ನಾಗಮ್ಮ ಹಾಗೂ ಅವರ ಮಕ್ಕಳಾದ ಮಾದೇಗೌಡ, ಗವಿಸಿದ್ದೇಗೌಡರ ಮಧ್ಯೆ ಆಸ್ತಿಗಳಲ್ಲಿ ವಿಭಾಗವಾಗಿದ್ದು ಸದರಿ ವಿಭಾಗ ಪತ್ರಕ್ಕೆ ನಾನು ಸಹ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸುಳ್ಳು. ಸದರಿ ವಿಭಾಗ ಪತ್ರಕ್ಕೆ ಮಹದೇವಮ್ಮ ಕೂಡ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸುಳ್ಳು.

ನನ್ನ ತಂದೆಯೇ ಅವರೆಲ್ಲಾ ಹೆಣ್ಣು ಮಕ್ಕಳ ಮದುವೆ ಮಾಡಿದ್ದಾರೆ ಎಂದರೆ ಸರಿ. ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು ನನ್ನ ತಂದೆ ಮನೆಗೂ ಹೋಗಿಬರುತ್ತಿದ್ದೇನು ಎಂದು ನುಡಿಯುತ್ತಾರೆ.

ನನಗೆ ಸಿದ್ದೇಗೌಡ ಎನ್ನುವವರು ತಾತನಾಗಬೇಕು ಎಂದರೆ ಸರಿ. ನನ್ನ ತಂದೆ ಬದುಕಿದ್ದ ಕಾಲದಲ್ಲಿ 1994 ರಲ್ಲಿ ಒಟ್ಟು ಕುಟುಂಬದಲ್ಲಿ ಭಾಗವಾಗಿತ್ತು ಎಂದರೆ ಸರಿಯಲ್ಲ. ಭಾಗವಾದ ನಂತರ ನಮ್ಮ ಮಧ್ಯೆ ಯಾವುದೇ ಒಟ್ಟು ಕುಟುಂಬ ಅಸ್ವಿತ್ತದಲ್ಲಿ ಇಲ್ಲ ನಾವೆಲ್ಲಾ ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ.

ನಾಗಮ್ಮನ ಮಗನಿಗೆ ನನ್ನ ಅಕ್ಕನ ಮಗಳನ್ನು ಮದುವೆ ಮಾಡಿಕೊಡಲಾಗಿದೆ ಎದಂರೆ ಸರಿ.

(ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.